# ದಾಸೋಹ ಇರಲಿ

ಭಾರತೀಯ ಪರಂಪರೆಯಲ್ಲಿ ದಾನ ಎಂಬುದನ್ನು ವೈಭವೀಕರಿಸಲಾಗಿದೆ. ಅವಶ್ಯಕತೆಗಿಂತ ಹೆಚ್ಚು ಸಂಪಾದಿಸಿದವರು, ತಾವು ಅನುಭವಿಸಿ ಮಿಕ್ಕಿದ್ದನ್ನು ಅಥವಾ ಅನುಭವಿಸದೇ ಉಳಿದಿರುವುದನ್ನು ದೀನರಿಗೆ ದುರ್ಬಲರಿಗೆ ನೀಡುವುದೇ ದಾನ. ಈ ದಾನದಲ್ಲಿ ಅನ್ನದಾನ, ವಸ್ತ್ರದಾನ, ಗೋದಾನ, ಭೂದಾನ... ಹೀಗೆ ನೂರಾರು ದಾನಗಳಿವೆ. ಇವೆಲ್ಲವೂ ಪುಣ್ಯ ಸಂಪಾದನೆಯ ಮೆಟ್ಟಿಲುಗಳು ಎಂದು ನಂಬಿಸಲಾಗಿದೆ. ಪ್ರತಿಯೊಬ್ಬರು ತಮ್ಮ ಆದಾಯದಲ್ಲಿ ಕೊಂಚವಾದರೂ ಇಲ್ಲದವರಿಗೆ ದಾನ ಮಾಡಬೇಕು ಎಂಬ ನಿಯಮ ಒಂದೆಡೆ ಇದ್ದರೆ ಭೂಸುರರಿಗೆ, ಪುರೋಹಿತರಿಗೆ, ದೇವಸ್ಥಾನಾದಿಗಳಿಗೆ ದಾನ ನೀಡಿದರೆ ಸತ್ತ ಮೇಲೆ ಸ್ವರ್ಗ ಪ್ರಾಪ್ತಿ ಎಂಬ ಇನ್ನೊಂದು ನಂಬಿಕೆ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಆದ್ದರಿಂದಲೆ ಇಂದಿನವರೆಗೂ ಜನಸಾಮಾನ್ಯರು ದಾನ ಮಾಡುವುದನ್ನು ಪರಮ ಪುಣ್ಯದ ಕೆಲಸವೆಂದು, ದಾನ ಮಾಡುವ ಮೂಲಕ ಮಾಡಿದ ದುಷ್ಕರ್ಮಗಳಿಂದ ಕ್ಲೀನ್ ಚಿಟ್ ಸಿಗುವುದೆಂದು ನಂಬಿಕೊಂಡು ಬರುತ್ತಿದ್ದಾರೆ. ಇಲ್ಲಿ ದಾನ ಕೊಡುವ ಮತ್ತು ಪಡೆಯುವ ಎರಡು ವರ್ಗಗಳಿವೆ. ಉಳ್ಳವರು ದಾನ ನೀಡುತ್ತಾರೆ. ಇಲ್ಲದವರು ಅಂದರೆ ನಿರ್ಗತಿಕರು ದಾನ ಪಡೆಯುತ್ತಾರೆ. ಇನ್ನೊಂದು ಬಗೆಯಲ್ಲಿ ಅತ್ಯಂತ ಕಡುಬಡವರೂ ಕೂಡ ದೇವರು–ಧರ್ಮಗಳ ಭಯದಿಂದ ದಾನ ನೀಡುತ್ತಾರೆ. ತಮಗೆ ಉಣ್ಣಲು ಇರದಿದ್ದರೂ ಕೂಡ ಬಡವರು ಪಾಪ ಪರಿಹಾರಕ್ಕೊ, ಪುಣ್ಯ ಸಂಪಾದನೆಯ ಆಮಿಷಕ್ಕೊ, ಮುಂದಿನ ಜನ್ಮದಲ್ಲಿ ಸುಖ–ಸಂಪತ್ತು ಪ್ರಾಪ್ತಿಯಾಗುತ್ತದೆ ಎಂಬ ಮೌಢ್ಯದಿಂದಲೋ ದಾನ ನೀಡುತ್ತಾರೆ. ಆದರೆ ದೇವರ ಹೆಸರಿನಿಂದ ದಾನ ಪಡೆಯಲು ಅರ್ಹತೆ ಪಡೆದ ವರ್ಗ ಮಾತ್ರ ದಾನ ಪಡೆದುಕೊಂಡು ಕೊಟ್ಟವರನ್ನು ಕೃತಾರ್ಥರನ್ನಾಗಿ ಮಾಡಿದ್ದೇವೆ ಎಂದು ಬೀಗುತ್ತದೆ. ನರಮಾನವರಿಗೆ ಸ್ವರ್ಗಕ್ಕೆ ಹೋಗಲು ವಿಐಪಿ ಪಾಸ್ ಕೊಟ್ಟಿದ್ದೇವೆ ಎಂದು ನಂಬಿಸುತ್ತದೆ. ಅಮಾಯಕ ಮುಗ್ಧರು ತಾವು ಕಷ್ಟಪಟ್ಟು ಸಂಪಾದಿಸಿದ್ದನ್ನು ದುಡಿಯದೇ ತಿನ್ನುವವರಿಗೆ ಅರ್ಪಿಸಿ ಭೌತಿಕವಾಗಿ ದಿವಾಳಿಯಾಗುತ್ತಾರೆ.

ದುರಂತವೆಂದರೆ ಇದೇ ದುಡಿಯುವ ವರ್ಗ ಇನ್ನೊಂದು ಹಂತದಲ್ಲಿ ಉಳ್ಳವರಿಂದ ಅನ್ನ ಅರಿವೆ ದಾನ ಪಡೆಯಲು ನಿಲ್ಲುತ್ತದೆ. ಆಗ ಅವರ ಕಣ್ಣಲ್ಲಿ ಅಸಹಾಯಕತೆಯೊಂದು ಕಾಲೂರಿ ನಿಂತು ಅವರನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತದೆ. ಈ ಬಾರಿ ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿ ಭೀಮಾನದಿ ತೀರದ ಹಳ್ಳಿಗಳಲ್ಲಿ ಜಲಪ್ರಳಯ ಉಂಟಾಗಿದ್ದು ರೈತಾಪಿ, ಕೃಷಿ ಕಾರ್ಮಿಕರು ತಮ್ಮೆಲ್ಲ ಬದುಕು ಕಳೆದುಕೊಂಡು ನಿಂತಿದ್ದಾರಷ್ಟೇ. ರಾತ್ರೋರಾತ್ರಿ ಎತ್ತೆತ್ತಲೂ ನೀರು ನುಗ್ಗಿ ಜನರು ಉಟ್ಟ ಬಟ್ಟೆಯಲ್ಲಿ ಮನೆಮಾರು ತೊರೆದು ಶಾಲೆ, ಸಮುದಾಯ ಭವನ, ಮಠ, ಮಸೀದಿಗಳಲ್ಲಿ ಆಶ್ರಯ ಪಡೆದಿದ್ದಾರೆ. ಸರ್ಕಾರ ಕಾಳಜಿ ಕೇಂದ್ರ ತೆರೆದು ಅಸಹಾಯಕರ ನೆರವಿಗೆ ನಿಂತಿದೆಯಾದರೂ ಎರಡು ಹೊತ್ತಿನ ಅನ್ನಸಾರು ಮಾತ್ರದಿಂದ ಬದುಕಲಾದೀತೆ?

ಹೊತ್ತು ಹೊಂಟರೆ ಜೀವನಯಾಪನೆಗೆ ಹಲ್ಲು ಉಜ್ಜುವ ಪೇಸ್ಟ್‌ನಿಂದ ಮೊದಲ್ಗೊಂಡು ಬಟ್ಟೆ, ಬರೆ, ಶುದ್ಧ ಕುಡಿಯುವ ನೀರು, ಔಷಧಿ ಇವಿಷ್ಟು ಕನಿಷ್ಠ ಅವಶ್ಯಕತೆಗಳು. ಆದರೆ ಎಲ್ಲವನ್ನು ಸರಕಾರ ಭರಿಸಲಾದೀತೆ ಎಂಬ ಬಿಟ್ಟಿ ಉಪದೇಶವು ಉಳ್ಳವರಿಂದ ಕೇಳಿ ಬರುತ್ತಲೆ ಇರುತ್ತದೆ. ಒಂದು ಸಂದರ್ಭದಲ್ಲಿ ಹಕ್ಕಿ–ಪಕ್ಕಿ, ಜನ–ಜಾನುವಾರುಗಳಿಗೆ ಕಣಜದಿಂದ ದವಸ ಧಾನ್ಯಗಳನ್ನು ತುಂಬಿ ಕೊಟ್ಟವರೆ ಈಗ ತುತ್ತು ಅನ್ನಕ್ಕೆ, ಜೊತೆ ಬಟ್ಟೆಗೆ, ಒಂದು ಹೊದಿಕೆಗೆ ಅಂಗಲಾಚಿ ನಿಂತಿದ್ದನ್ನು ನೋಡಿದಾಗ ಕರುಳು ಚುರ್ ಎನ್ನದೆ ಇರದು.

ಸರ್ಕಾರದ ಕಿಂಚಿತ್ತು ಪರಿಕರಗಳು ಅವರ ಜೀವನಯಾಪನೆಗೆ ಸಾಲದಾದಾಗ ಸ್ಥಳೀಯ ದಾನಿಗಳು ವಸ್ತುಗಳನ್ನು ಸಂಗ್ರಹಿಸಿ ನೆರೆ ಪ್ರದೇಶಗಳಿಗೆ ಹಂಚಲು ಹೋದಾಗ ಅವರ ನೋವೊಂದು ಕಣ್ಣಲ್ಲಿ ಪಸೆಯಾಗಿ ನಿಂತಿತ್ತು. ಕೆಲವರು ಹಳೆಯ ಬಟ್ಟೆಗಳನ್ನು ನಿರ್ವಾಹವಿಲ್ಲದೆ ಪಡೆಯಲು ಮುಂದಾದರೆ ಇನ್ನೂ ಕೆಲವರು ಮುಂದೆ ಬರಲೇ ಇಲ್ಲ. ಉಳ್ಳವರು ಬಳಸಿ ಬಿಸಾಡಿದ ಸೀರೆ, ಚಪ್ಪಲಿ, ಪಾತ್ರೆ, ಪಗಡೆ, ಕೆಲವೊಮ್ಮೆ ದಿನೋಪಯೋಗಿ ವಸ್ತುಗಳ ಕಿಟ್ ಹೀಗೆ ಏನೆಲ್ಲ ಕೊಡಲು ಮುಂದಾದರೂ ಪಡೆಯುವವರಲ್ಲಿ ಒಂದು ಬಗೆಯ ಕಸಿವಿಸಿ, ದುರ್ಬಲ ರೋಷವೊಂದು ಹೊಗೆಯಾಡುತ್ತಿತ್ತು. ಸರ್ಕಾರದಿಂದ ಕೊಡುವ ವಸ್ತುಗಳ ಮೇಲೆ ಸಂತ್ರಸ್ತರ ಹಕ್ಕು ಇರುತ್ತದೆ. ಆದರೆ ಖಾಸಗಿಯವರು ನೀಡುವ ದಾನಕ್ಕೆ ಮುಲಾಜು ಇರುತ್ತದೆ. ಕೊಟ್ಟವರಿಗೆ ಮೇಲರಿಮೆ ತಂದರೆ ಪಡೆದವರಿಗೆ ಕೀಳರಿಮೆಯೊಂದು ಮುಕ್ಕಿ ತಿನ್ನುತ್ತದೆ. ಕೊಡುವುದು ತೃಪ್ತಿಯನ್ನು ನೀಡಿದರೆ ಪಡೆಯುವುದು ಕುಬ್ಜತೆಯನ್ನು, ಸಂಕಟವನ್ನು ಉಂಟು ಮಾಡುತ್ತದೆ. ಸರ್ಕಾರವು ಬಡಬಗ್ಗರಿಗೆ ಕೊಡುವುದು ಬಿಟ್ಟಿಯಲ್ಲ. ದೇಶದಲ್ಲಿ ಸಂಪತ್ತನ್ನು ಉತ್ಪಾದಿಸುವವರು ದುಡಿಯುವ ಜನರೆ ಹೊರತು ಬಂಡವಾಳಿಗರಲ್ಲ. ಶ್ರಮವೇ ಸಂಪತ್ತು. ಶ್ರಮಿಕರ ಮೂಲಕ ಉತ್ಪಾದಿಸಲಾದ ಸಂಪತ್ತಿನ ಮೇಲೆ ಅಧಿಕಾರ ಹೊಂದಿದ ಬಂಡವಾಳಿಗರು ಶ್ರಮವನ್ನು ಲೂಟಿ ಮಾಡುತ್ತಾರೆ. ಹೀಗೆ ಶೇಖರಣೆಯಾದ ಸಂಪತ್ತಿನ ಸ್ವಲ್ಪ ಭಾಗವನ್ನು ನಿರ್ಗತಿಕರಿಗೆ ನೀಡುವುದನ್ನು ಔದಾರ್ಯವಾಗಿ ಬಿಂಬಿಸುತ್ತದೆ. ಅವರದೇ ಶ್ರಮದಿಂದ ಉತ್ಪಾದನೆಯಾದ ಸಂಪತ್ತನ್ನು ಅವರಿಗೆ ಎಸೆದು ಹಂಗಿಸುವ ಲೋಕವನ್ನು ಕಂಡು 12ನೇ ಶತಮಾನದ ಕವಯಿತ್ರಿ ಅಕ್ಕಮಹಾದೇವಿ 'ಅನ್ನವ ನೀಡುವವರಿಂಗೆ ಧಾನ್ಯವೆಸೆವ ಲೋಕ, ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ' ಎಂದು ಮರುಗಿದ್ದಾಳೆ.

ರೈತಾಪಿ, ಕೃಷಿ ಕೂಲಿ ಕಾರ್ಮಿಕರಿಗೆ ಅವರ ದುಡಿತಕ್ಕೆ ತಕ್ಕ ಕೂಲಿ, ರೈತರ ಬೆಳೆಗೆ ಉನ್ನತ ದರಗಳು ಸಿಗುವುದಾದರೆ ಅವರೂ ಕೂಡ ಪಕ್ಕಾ ಮನೆ, ಬ್ಯಾಂಕಿನಲ್ಲಿ ಹಣ, ಮತ್ತೆಲ್ಲ ಸೌಕರ್ಯಗಳನ್ನು ಹೊಂದಿದ್ದರೆ ಎಂಥದ್ದೆ ಅವಘಡ ಸಂಭವಿಸಿದಾಗಲೂ ಎದುರಿಸುವ ಕ್ಷಮತೆ ಹೊಂದಿರುತ್ತಿದ್ದರು. ಆದ್ದರಿಂದ ದಾನ ಬೇಡ, ದಾಸೋಹ ಇರಲಿ ಎಂದರು ಶರಣರು. ದಾನ ಸಂಪತ್ತಿನ ಅಸಮಾನ ಹಂಚಿಕೆಯ ದ್ಯೋತಕವಾದರೆ ದಾಸೋಹ ಪ್ರಾಮಾಣಿಕ ದುಡಿತ ಮತ್ತು ಸಮಾನ ವಿನಿಯೋಗವನ್ನು ನಿಹಿತಗೊಳಿಸುತ್ತದೆ. ಎಲ್ಲರೂ ಶಕ್ತ್ಯಾನುಸಾರ ದುಡಿಯಬೇಕು. ಅವಶ್ಯಕತೆ ಇದ್ದಷ್ಟು ಪಡೆಯಬೇಕು. ಸೋಹಂ ಎಂದೆನಿಸದೇ ದಾಸೋಹಂ ಎಂದೆನಿಸಯ್ಯಾ ಎನ್ನುತ್ತಾನೆ ಬಸವಣ್ಣ. ಹೀಗಾದಾಗ ಸಮಾಜದಲ್ಲಿ ನಿರ್ಗತಿಕರು ಸೃಷ್ಟಿಯಾಗುವುದೇ ಇಲ್ಲ. ಈ ಮಾತು ಅಪ್ರಾಯೋಗಿಕ ಆದರ್ಶವಲ್ಲ. ಕಾರ್ಯಸಾಧುವಾದ ಇಂಥ ವ್ಯವಸ್ಥೆಯೊಂದು ನಿರ್ಮಾಣವಾಗಲು ಜನಮಾನಸ ಎಚ್ಚೆತ್ತುಕೊಳ್ಳಬೇಕು ಅಷ್ಟೇ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಒಂದು ಜನಾಂಗ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂಬುದನ್ನು ನೋಡಲು ಆ ಜನಾಂಗದ ಸ್ತ್ರೀಯರನ್ನು ಪುರುಷರು ಯಾವ ದೃಷ್ಟಿಯಿಂದ ನೋಡುತ್ತಿದ್ದಾರೆ ಎನ್ನುವುದು ಒರೆಗಲ್ಲು.

  —ಸ್ವಾಮಿ ವಿವೇಕಾನಂದ

- ಅನುಭವ ಅರಿವಿಗೆ ಹೆದ್ದಾರಿ.

  —ತರಾಸು

- ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸ.

  —ಕಾರ್ಲ್‌ಮಾರ್ಕ್ಸ್

- ಸೇವೆ ಮಾಡುವುದರಿಂದ ಎಂದೂ ತೀರದಂತಹ ಸುಖ ಲಭಿಸುತ್ತದೆ.

  —ಕಬೀರ್

- ಯಾವ ಕೆಲಸವನ್ನೇ ಆಗಲಿ ಉತ್ಸಾಹದಿಂದ ಮಾಡಬಲ್ಲವನು ತನ್ನ ಗುರಿ ಮುಟ್ಟದೆ ಇರಲಾರ.

  —ವಾಲ್ಮೀಕಿ

- ಹೆತ್ತವರನ್ನು ಗೆಲ್ಲಬಲ್ಲ ಆಯುಧವೆಂದರೆ ಪ್ರೀತಿ. ಅದಲ್ಲದೆ ಬೇರೆ ಮಾರ್ಗವಿಲ್ಲ. ಅದರಿಂದಲೇ ಸಾಧಿಸಿ.

  —ಮಹಾತ್ಮ ಗಾಂಧಿ